ಅಧ್ಯಕ್ಷರು :— ಮಾನ್ಯ ನಾಗೇಗೌಡರು, ಬೈರೇಗೌಡರು ಒಪ್ಪಿಕೊಂಡ ಮೇಲೆ ಮುಖ್ಯಮಂತ್ರಿಗಳು ಬೇರೆ ಮಾತು ಹೇಳುತ್ತಾರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಗುಲ್ಬರ್ಗಾದಲ್ಲಿ ತಾವು ಸಭೆ ಮಾಡಿದ್ದಿರೋ; ಮುಖ್ಯಮಂತ್ರಿಗಳು ಮಾಡಿದ್ದರೋ?

ಶ್ರೀ ಶರಣಬಸಪ್ಪ ದರ್ಶನಾಪುರ್ :— ಇದು ಇಡೀ ರಾಜ್ಯದ ಸಮಸ್ಯೆ. ಇದರ ಬಗ್ಗೆ ನಾಳೆಯೇ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :— ಬೈರೇಗೌಡರು ಮತ್ತು ನಾಗೇಗೌಡರು ಇವತ್ತಿನ ಪರಿಸ್ಥಿತಿಯಲ್ಲಿ ಹೇಳಿದ ಮೇಲೆ ಮುಖ್ಯಮಂತ್ರಿಯವರು ಒಪ್ಪಿಕೊಳ್ಳುವುದಿಲ್ಲವೆ?

8.10 ಪಿ.ಎಂ.

ಅಧ್ಯಕ್ಷರು :— ನಾವು ಹೇಳಿದ ಎಷ್ಟೋ ವಿಚಾರಕ್ಕೆ ಧೈರ್ಯ ಮಾಡುತ್ತೀರಿ. ನಾಗೇಗೌಡರು ಹೇಳಿದರೆ ಇವತ್ತಿನ ದಿವಸ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುವುದಿಲ್ಲವೇ? ನೀವು ಎರಡು ತಿಂಗಳ ಮಟ್ಟಿಗೆ ಒಪ್ಪಿಕೊಳ್ಳಿ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ನಡೆದಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಅಧ್ಯಕ್ಷರು :— ನಾನು ಹೇಳುವುದು ಕೇಳಿ. ನಾನೂ ಒಬ್ಬ ರೈತ. ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ನೀವು ಹಾಗೂ ನಾಗೇಗೌಡರು ಹೇಳಿ, ಇವತ್ತಿನ ಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆ. ಇಲ್ಲ ಎಂದು ಹೇಳುವ ಪ್ರಶ್ನೆನೇ ಇಲ್ಲ.

ಶ್ರೀ ಸಿ. ಬೈರೇಗೌಡ :— ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಇದೇ ರೀತಿ ಹೇಳಿದಿರಿ ಎಂದು ತಿಳಿಸುತ್ತೇವೆ.

ಅಧ್ಯಕ್ಷರು :— ಮಾಡುತ್ತಾರೆ ಬಿಡಿ. ಅವರಿಗೆ ಹೇಳುತ್ತಾರೆ. ಬೈರೇಗೌಡರು ನಕ್ಕಮೇಲೆ ಗೊತ್ತಾಗುವುದಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಬೇರೆ ಯಾವುದಾದರೂ ಗ್ರಾಂಟ್ ರಿಲೀಸ್ ಮಾಡುವುದು, ಪೋಸ್ಟಿಂಗ್, ಟ್ರಾನ್ಸ್‌ಫರ್ ಮಾಡುವುದು 10-15 ದಿವಸ ನಿಧಾನವಾದರೂ ನಡೆಯುತ್ತದೆ. ಆದರೆ ಇವರು ಕನೆಕ್ಷನ್ ತೆಗೆದ ಮೇಲೆ 4-5 ದಿವಸಕ್ಕೆ ಬೆಳೆ ಒಣಗಿ ಹೋಗುತ್ತದೆ.

(ಐ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಇಂಡಿವಿಜ್ಯುಯಲ್ ಬೋರ್ ಕೊಡುವುದರ ಬಗ್ಗೆ.

ಶ್ರೀ ಸಯದ್ ಜುಲ್ಫಿಕರ್ ಹಶ್ಮಿ :— ಮಾನ್ಯ ಅಧ್ಯಕ್ಷರೇ, ಮೈನಾರಿಟಿ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್‌ನಿಂದ ಗಂಗಾ ಕಲ್ಯಾಣ ಯೊಜನೆಯನ್ನು ನಡೆಸುತ್ತಿದ್ದಾರೆ. ಈ ಮೈನಾರಿಟಿ ಡೆವೆಲಪ್‌ಮೆಂಟ್ ಕಾರ್ಪೋರೇಷನ್‌ಗೆ ತಾವೇನು ಗಂಗಾ ಕಲ್ಯಾಣ ಯೋಜನೆಯನ್ನು ಕೊಡುತ್ತಿದ್ದೀರಿ ಇದರ ಅನುಕೂಲ ಪಡೆದುಕೊಳ್ಳಲು ಒಂದೇ ಕಡೆ 4-5 ಜನ ರೈತರು ಬೇಕಾಗುತ್ತದೆ. ಹಾಗೂ 8-10 ಎಕರೆ ಜಮೀನು ಬೇಕಾಗುತ್ತದೆ. ಆದರೆ ಅಲ್ಪಸಂಖ್ಯಾತರಿಗೆ ಒಂದೇ ಕಡೆ 3-4 ಜನ ರೈತರು ಸಿಗುವುದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ. ತಮಗೆ ಗೊತ್ತಿದೆ, ನಮ್ಮ ಅಭಿಪ್ರಾಯ ಎನಿದೆ ಎಂದರೆ ತಾವು ಇಂಡಿವಿಜುಯಲ್ ಆಗಿ ಗಂಗಾ ಕಲ್ಯಾಣ ಯೋಜನೆಯನ್ನು ಕೊಡಿ. ತಾವೇನು ಆದಕ್ಕೆ ನೂರು ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ ಅದನ್ನು ಇಂಡಿವಿಜುಯಲ್ ಆಗಿ ಕೊಟ್ಟಾಗ 75 ಪರ್ಸೆಂಟ್ ಸಬ್ಸಿಡಿ ಕೊಡಿ. ಗಂಗಾ ಕಲ್ಯಾಣ ಯೋಜನೆಯನ್ನು ಮೈನಾರಿಟಿ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ತಾವು ಕೊಡಬೇಕು. ಮತ್ತೆ ಹೋದವರ್ಷ ಏನು ಗಂಗಾ ಕಲ್ಯಾಣ ಯೊಜನೆಯನ್ನು ಕೊಟ್ಟಿದ್ದೀರಿ, ಅವು ಬೋರ್‌ವೆಲ್ ಹೊಡೆದು ಒಂದು ವರ್ಷದ ಮೇಲೆ ಆದಜರೂ ಕೂಡ ಇನ್ನು ಅಲ್ಲಿ ಪಂಪ್‌ಸೆಟ್ ಇಲ್ಲ ಎಲೆಕ್ಟ್ರಿಕಲ್ ಕನೆಕ್ಷನ್ ಇಲ್ಲ. ಅಲ್ಲದೆ ಅಲ್ಲಿ ಸಾಕಷ್ಟು ತೊಂದರೆ ಇದೆ. ಆದುದರಿಂದ ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಏನೆಂದರೆ ತಾವು ಸೀರಿಯಸ್ ಆಗಿ ಅಲ್ಪಸಂಖ್ಯಾತರಿಗೆ ಏನಾದರೂ ಸಹಾಯ ಮಾಡಬೇಕು. ನಾವು ಏನು ಇಂಡಿವಿಜುಯ್ಯಲ್ ಆಗಿ ಈಗಾಗಲೇ ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್‌ನಲ್ಲಿ ಕೊಡುತ್ತಿದ್ದೀರಿ, ಆ ರೀತಿಯಾಗಿ ಅನ್ವಯಿಸುವಂತೆ ಒಂದು ಆಜ್ಞೆಯನ್ನು ಅಲ್ಪಸಂಖ್ಯಾತರ ಡೆವೆಲಪ್‌ಮೆಂಟ್ ಕಾರ್ಪೋರೇಷನ್‌ರವರಿಗೆ ಮಾಡುವುದು. ಇದರ ಬಗ್ಗೆ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು :— ಅವರು ಹೇಳಿದ್ದು ತಮಗೆ ಅರ್ಥವಾಯಿತೇ?

ಶ್ರೀ ಎಸ್.ಎಸ್. ಪಾಟೀಲ್ :— ಅವರು ಹೇಳಿದ್ದೇನೆಂದರೆ, ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್‌ನವರಿಗೆ ಇಂಡಿವಿಜುಯಲ್ ಆಗಿ ಬೋರ್‌ಗೆ ಕೋಡುವ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ಕೂಡ ಬೋರ್ ತೆಗೆಸಿ ಕೊಡಬೇಕು ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಾಳೇ ಕ್ಯಾಬಿನೇಟ್ ಮೀಟಿಂಗ್ ಇದೆ, ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು :— ತಮಗೆ ಆದಕ್ಕೆ ಹೇಳುವುದು ಅರ್ಥ ಮಾಡಿಕೊಳ್ಳಿ ಎಂದು. ಮೈನಾರಿಟಿ ಕಮ್ಯೂನಿಟಿಗೆ ಗಂಗಾ ಕಲ್ಯಾಣ ಯೋಜನೆ ಇಟ್ಟಿದ್ದೀರಿ. ಮೈನಾರಿಟಿ

ಸಮಾಜದವರು ಎಲ್ಲಾ ಒಂದೇ ಕಡೆ ಜಮೀನು ಇರುವುದು ಬಹಳ ಅಪರೂಪ. ಆದ್ದರಿಂದ ಆ ಯೋಜನೆ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಅದಕ್ಕೆ ಬದಲಾಗಿ ಒಂದು ಅಡ್ಮಿನಿಸ್ಟೇಟೀವ್ ಆರ್ಡರ್ ಇಂಡಿವಿಜುಯಲ್ ಬೋರ್‌ವೆಲ್‌ಗೆ ಕೊಟ್ಟರೆ, ಎರಡು ಎಕರೆ, ಮೂರು ಎಕರೆ ಇರುವವರಿಗೆ ನೀರು ಸಿಕ್ಕರೆ ನಾವು ಬದುಕಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್ ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಚಾರದ ಬಗ್ಗೆ ಸರ್ಕಾರದಲ್ಲಿ ಚರ್ಚೆ ನಡೆದಿದೆ. ಅವರಿಗೆ ಕೂಡ ಇಂಡಿವಿಜುಯಲ್ ಬೋರ್‌ವೆಲ್ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಅದರ ಬಗ್ಗೆ ನಾಳೆ ಕ್ಯಾಬಿನೇಟ್‌ನಲ್ಲಿ ಮಾತನಾಡುತ್ತೇವೆ.

ಅಧ್ಯಕ್ಷರು :— ನೀವು ಈಗಾಗಲೇ ಹಣವನ್ನು ಗಂಗಾ ಕಲ್ಯಾಣ ಯೋಜನೆಗೆ ಮೀಸಲಿಟ್ಟಿದ್ದೀರಿ. ಅದು ಉಪಯೋಗಕ್ಕೆ ಬರುತ್ತಿಲ್ಲ. ಪ್ರಯೋಜನವಾಗುತ್ತಿಲ್ಲ. ಅದರ ಬದಲಿಗೆ ಅದೇ ಹಣವನ್ನು ತಾವೇನು 100 ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ, ಅಂತಹ ಕಡೆ 50 ಪರ್‌ಸೆಂಟ್ ಸಬ್ಸಿಡಿ ಕೊಡಿ ಎಂದು ಕೇಳುತ್ತಾರೆ. ನಿಮಗೇನು ದುಡ್ಡಿನ ಹೊರೆ ಬೀಳುವುದಿಲ್ಲ. ಮನಸ್ಸು ಅಷ್ಟೇ ಬೇಕಾಗಿರುವುದು. ಒಂದು ಆರ್ಡರ್ ಹೊರಡಿಸಬೇಕಾಗಿದೆ.

ಶ್ರೀ ಎಸ್.ಎಸ್ ಪಾಟೀಲ್ :— ಆಯಿತು ಮಾಡುತ್ತೇವೆ.

ಅಧ್ಯಕ್ಷರು :— ನಾಳೆ ಬೆಳಿಗ್ಗೆ 9 ಗಂಟೆಗೆ ಸದನವು ಸೇರುತ್ತದೆ. ಮೊದಲು ಮಾನ್ಯ ಶಿವರಾಮೇಗೌಡರು ಒಂದು ಗಂಟೆ ಕಾಲ ಭಾಷಣ ಮಾಡಿ ಮುಕ್ತಾಯ ಮಾಡುತ್ತಾರೆ. 10 ಗಂಟೆಯಿಂದ ನಾವು ಪ್ರಶ್ನೋತ್ತರ ತೆಗೆದುಕೊಳ್ಳುತ್ತೇವೆ. ಏಕೆಂದರೆ ಅನೇಕ ಸದಸ್ಯರಿಗೆ ಮಾಹಿತಿ ಇರಲಿಕ್ಕಿಲ್ಲ. ಆ ದೃಷ್ಟಿಯಿಂದ 10ಿಂದ 11 ಗಂಟೆಗೆ ಪ್ರಶ್ನೋತ್ತರ ತೆಗೆದುಕೊಂಡು ಮುಗಿಸೋಣ. ಅನಂತರ ನಾವು ಭಾಷಣಗಳನ್ನು ಮಂದುವರೆಸಿಕೊಂಡು ಹೋಗೋಣ. ನಾಳೆ ಶೂನ್ಯವೇಳೆ ನೋಟೀಸ್ ಯಾರೂ ಕೊಡಬೇಡಿ. ಇವತ್ತು ಬಾಕಿ ಇರುವುದನ್ನು ನಾಳೆ ತೆಗೆದುಕೊಳ್ಳೋಣ. ನಾಳೆ ಜೀರೋ ಅವರ್ ಇರುವುದಿಲ್ಲ. ಹಾಗೂ ನಾಳೆ ಯಾವುದೂ ಗಮನ ಸೆಳೆಯುವ ಸೂಚನೆ ಇರುವುದಿಲ್ಲ. ಎಲ್ಲಾ ಡ್ರಾಪ್ ಮಾಡುತ್ತೇವೆ. ಟೈಂ ಅಡ್ಜಸ್ಟ್ ಮಾಡಿಕೊಳ್ಳಬೇಕು. ಸಹಕರಿಸಿದ್ದಕ್ಕೆ ಧನ್ಯವಾದಗಳು. ನಾಳೆ ಮತ್ತೆ ಸಭೆ 9-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8.00 ಗಂಟೆ 15 ನಿಮ್ಷಕ್ಕೆ ಮುಕ್ತಾಯಗೊಂಡು ಪುನ:
ದಿನಾಂಕ : 12.3.99ರಂದು ಬೆಳಿಗ್ಗೆ 9.00 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)